ಬಗರ್ ಹುಕುಂ ಸಾಗುವಳಿ ಬಗ್ಗೆ

೯೬೬ (೧) ಶ್ರೀ ಎಂ.ಪಿ. ಕೇಶವ ಮೂರ್ತಿ (ಆನೇಕಲ್).— ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆನೇಕಲ್ ತಾಲ್ಲೂಕಿನಲ್ಲಿ ಬಗರ್‌ಹುಕುಮ್ ಸಾಗುವಳಿ ಮಾಡುತ್ತಿರುವ ಜಮೀನನ್ನು ಪರಿಶಿಷ್ಟ ಜಾತಿಯ ಜನಾಂಗದವರಿಗೆ ಖಾಯಂ ಮಾಡುವ ಭರವಸೆಯನ್ನು ಕಳೆದ ಬಾರಿ ಸದನದಲ್ಲಿಯೇ ನೀಡಿದರೂ ಇದುವರೆವಿಗೂ ಆ ಜಮೀನುಗಳನ್ನು ಆ ಜನಾಂಗದವರಿಗೆ ಖಾಯಂ ಮಾಡದಿರಲು ಕಾರಣ ಏನು?

ಆ) ಈ ಜನಾಂಗದವರು ಮಾಡುತ್ತಿರುವ ಜಮೀನನ್ನು ಖಾಯಂ ಮಾಡಲು 'ಹಸಿರುವಲಯ' ಎಂಬ ಘೋಷಣೆ ತಡೆ ಇದ್ದರೆ ಈ ಪರಿಶಿಷ್ಟ ಜನಾಂಗದವರಿಗೆ ವಿನಾಯಿತಿ ನೀಡಿ ಕೂಡಲೇ ಖಾಯಂ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ಸರ್ಕಾರವು ಆದೇಶ ಸಂಖ್ಯೆ: ಆರ್‌ಡಿ ೧೦೫ ಎಲ್‌ಜಿಪಿ ೭೭, ದಿನಾಂಕ: ೧೯-೧೯೭೭ ಮತ್ತು ಸಂಖ್ಯೆ: ಆರ್‌ಡಿ ೨೭ ಎಲ್‌ಜಿಪಿ ೮೧, ದಿನಾಂಕ: ೨೭-೩-೧೯೮೧ರಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡಿದ ಸರ್ಕಾರಿ ಜಮೀನನ್ನು ಅರ್ಹರಾದ ಭೂಹೀನ ಹರಿಜನ-ಗಿರಿಜನ, ಭೂ ಕಾರ್ಮಿಕರು, ಸಣ್ಣ ಹಾಗೂ ಅತಿಸಣ್ಣ ರೈತರ ಪರವಾಗಿ ಸಕ್ರಮೀಕರಣ ಗೊಳಿಸುವ ಸಲುವಾಗಿ ಸರ್ಕಾರ ಸೂಕ್ತ ಕ್ರಮ ಕೈಗೊಂಡಿರುತ್ತದೆ. ಇಂತಹ ಅರ್ಹ ಹರಿಜನ-ಗಿರಿಜನರಿಗೆ ದಿನಾಂಕ: ೧೫-೮-೧೯೮೨ರ ಒಳಗೆ ಮತ್ತು ಇತರರಿಗೆ ೧೫-೧೧-೧೯೭೮ರ ಒಳಗೆ ಸಕ್ರಮೀಕರಣಗೊಳಿಸಲು ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ಕಾಲ ನಿಗದಿತಪಡಿಸಲಾಗಿತ್ತು ಮತ್ತು ಅರ್ಹರಾದ ಬಹುತೇಕ ಎಲ್ಲರಿಗೂ ಮೇಲ್ಕಂಡ ಆದೇಶಗಳ ಪ್ರಕಾರ ಸಕ್ರಮೀಕರಣ ಗೊಳಿಸಲಾಗಿದೆ.

ಇನ್ನೂ ಒತ್ತುವರಿ ಪ್ರಕರಣಗಳು ನಡೆಯುತ್ತಾ ಬಂದು ಸಕ್ರಮೀಕರಣಗೊಳಿಸುವ ಪ್ರಶ್ನೆ ಉದ್ಭವಿಸುವುದರಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜನರಲ್ಲಿನ ಅನಿಶ್ಚಿತತೆಯನ್ನು ಹೋಗಲಾಡಿಸಿ ಅಂಥವರು ಬೇಸಾಯ ಕಸಬನ್ನು, ನಿಶ್ಚಿತತೆ ರೀತಿಯಲ್ಲಿ ನಡೆಸಿಕೊಂಡು ಹೋಗಲೂ ಅನುವು ಆಗುವಂತೆ ಸರ್ಕಾರವು ಭೂಕಂದಾಯ. ಅಧಿನಿಯಮ, ೧೯೬೪ರ ಕಲಂ ೪೪ಕ್ಕೆ ಸೂಕ್ತ ತಿದ್ದುಪಡಿಯನ್ನು ತಂದು ಅನುಕೂಲ ಮಾಡಿಕೊಡಲು ಸರ್ಕಾರ ತೀರ್ಮಾನಿಸಿದೆ. ಈಗ ಸದರಿ ತಿದ್ದುಪಡಿಯ ಕರಡು ವಂಸೂದೆಯು ವಿಧಾನ ಮಂಡಲದ ಉಭಯ ಸದನಗಳ ಜಂಟಿ ಸಲಹಾ ಸಮಿತಿಯ ಪರಿಶೀಲನೆಯಲ್ಲಿದೆ.

ಆ) 'ಹಸಿರು ವಲಯ'ವನ್ನು ನಿಗಧಿಪಡಿಸಿದ ಮಿತಿಯ ಜಮೀನಿನಲ್ಲಿಯ ಬಗರ್‌ಹುಕುಂ ಸಾಗುವಳಿಯನ್ನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದವರು ಮಾಡಿದ್ದಲ್ಲಿ ಅಂತಹ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ತಿದ್ದುಪಡಿಯ ವಂಸೂದೆಯ ನಿಯಮಾವಳಿಯಲ್ಲಿ ಅವಕಾಶ ಕಲ್ಪಿಸಲಾಗುತ್ತದೆ.

ರಾಜ್ಯದಲ್ಲಿ ರೈತರು ಅಕ್ರಮಣ ಮಾಡಿರುವ ಸರಕಾರಿ ಭೂಮಿ

೧೦೫೨. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ರೈತರು ಒತ್ತುವರಿ ಮಾಡಿಕೊಂಡಿರುವ ಸರ್ಕಾರಿ ಭೂಮಿಯ ವಿಸ್ತೀರ್ಣ ಎಷ್ಟು;

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಒತ್ತುವರಿ ಮಾಡಿಕೊಂಡಿರುವ ಸರಕಾರಿ ಭೂಮಿಯ ವಿಸ್ತೀರ್ಣ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಇ) ಸರಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿರುವ ರೈತರು ತೀವ್ರ ಹಾಗೂ ದಂಡನೆ ತೀವ್ರ ನೀಡದೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೃಂದಾಯ ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ಒತ್ತುವರಿ ಮಾಡಿಕೊಂಡಿರುವ ಸರಕಾರಿ ಭೂಮಿಯು ವಿಸ್ತೀರ್ಣ ೩,೨೧,೪೪೭ ಎಕರೆ ೧೭ ಗುಂಟೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಒತ್ತುವರಿ ಮಾಡಿಕೊಂಡಿರುವ ಸರಕಾರಿ ಭೂಮಿಯು ವಿಸ್ತೀರ್ಣ– ತಾಲ್ಲೂಕುವಾರು ವಿವರ ಈ ರೀತಿ ಇದೆ.

			ಎ	ಸೆಂ
೧)	ಸೂಳ್ಯ	—	೪೨೧೮	೦೦
೨)	ಕುಂದಾಪುರ	—	೨೫೭೭	೨೫
೩)	ಪುತ್ತೂರು	—	೭೨೬೦	೪೧
೪)	ಉಡುಪಿ	—	೧೭೬೩	೦೨
೫)	ಬಂಟ್ವಾಳ	—	೬೨೭೨	೮೦
೬)	ಬೆಳ್ತಂಗಡಿ	—	೭೧೮೭	೧೨
೭)	ಕಾರ್ಕಳ	—	೨೩೧೯	೬೪
೮)	ಮಂಗಳೂರು	—	೬೩೦	೯೯
	ಒಟ್ಟು		೩೨೫೯೯	೨೧

ಇ) ಆನಧಿಕೃತ ಅಕ್ರಮಣ ಮಾಡಿಕೊಂಡವರಿಗೆ ಹೊರಿಸಲಾದ ತೀರ್ಪು ಹಾಗೂ ದಂಡನೆ ತೀರ್ವೆಯನ್ನು ಒತ್ತುವರಿದಾರರು ಪಾವತಿ ಮಾಡುತ್ತಿರುತ್ತಾರೆ. ಬೆಳ್ತಂಗಡಿ ತಾಲ್ಲೂಕಿನ ಎರಡು ಗ್ರಾಮಗಳಲ್ಲಿನ ಆರು ಪ್ರಕರಣಗಳಲ್ಲಿ ಮಾತ್ರ ಕರ್ನಾಟಕ ರೆವಿನ್ಯೂ ಅಪಿಲೇಟ್ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿರುತ್ತಾರೆ.

ಗೇಣಿದಾರರಿಂದ ವಸೂಲು ಮಾಡಿದ ಪರಿಹಾರದ ಬಗ್ಗೆ

೧೦೫೩. (ಉ) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).— ಮಾನ್ಯ ಕೃಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦ ಎಕರೆಗೆ ಒಳಪಟ್ಟಂತಹ ಮಾಜಿ ಗೇಣಿದಾರರಿಂದ ಈವರೆಗೆ ವಸೂಲ್ಮಾಡಿದ ಪರಿಹಾರ ಹಣ ಎಷ್ಟು ? (೧೯೭೫-೮೬ ಮತ್ತು ೧೯೮೬-೮೭ ವರ್ಷವಾರು ವಂತು ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮವೇನು ?